ಗಂಗಾವತಿ ತಾಲ್ಲೂಕಿನಲ್ಲಿ ಕಟ್ಟಡವಿಲ್ಲದ ಪ್ರಾಥಮಿಕ ಶಾಲೆಗಳು

೧೪೧೫. ಶ್ರೀ ಶ್ರೀರಂಗದೇವರಾಯಲು (ಕನಕಗಿರಿ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಂಗಾವತಿ ತಾಲ್ಲೂಕಿನಲ್ಲಿ ಕಟ್ಟಡಗಳಿಲ್ಲದ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ?

ಆ) ಸದರಿ ಶಾಲೆಗಳ ಕಟ್ಟಡ ನಿರ್ಮಾಣದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ೧೭.

ಆ) ಗಂಗಾವತಿ ತಾಲ್ಲೂಕಿನಲ್ಲಿ ೧೯೮೪-೮೫ನೇ ಸಾಲಿನಲ್ಲಿ ೧೧ ಶಾಲಾ ಕೊಠಡಿ ಕಟ್ಟಲು ಕ್ರಮವಹಿಸಿಕೊಂಡಿದ್ದು ಇದರಲ್ಲಿ ೭ ಕೊಠಡಿಗಳ ನಿರ್ಮಾಣ ಪೂರ್ಣಗೊಂಡಿದೆ. ಉಳಿದ ೪ ಕೊಠಡಿಗಳು ಅಪೂರ್ಣಗೊಂಡಿವೆ.

ಮುಧೋಳ ತಾಲ್ಲೂಕಿನ ಇಂಗಳಗಿ ಗ್ರಾಮದ ಪ್ರೌಢಶಾಲೆ ಶಿಥಿಲಗೊಂಡಿರುವ ಬಗ್ಗೆ

೯೩೩. ಶ್ರೀ ಬಿ. ಜಿ. ಜಮಖಂಡಿ (ಮುಧೋಳ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಧೋಳ ತಾಲ್ಲೂಕಿನ ಇಂಗಳಗಿ ಗ್ರಾಮದ ಪ್ರೌಢಶಾಲೆ ಶಿಥಿಲಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸದರಿ ಶಾಲಾ ಕಟ್ಟಡವನ್ನು ದುರಸ್ತಿಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ದುರಸ್ತಿಮಾಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎನ್. ಆರ್, ಇ. ಪಿ. ಕಾರ್ಯಕ್ರಮದ ಬಗ್ಗೆ

೧೨೪೭. ಶ್ರೀ ವಿನಯಕುಮಾರ ಸೊರಕೆ (ಪುತ್ತೂರು). — ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎನ್. ಆರ್. ಇ. ಪಿ. ಯೋಜನೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರದವರು ಮಂಜೂರು ಮಾಡಿದ ಹಣವೆಷ್ಟು ?

ಆ) ಪುತ್ತೂರು ತಾಲ್ಲೂಕಿನಲ್ಲಿ ೧೯೮೫ನೇ ಸಾಲಿಗೆ ಎನ್. ಆರ್. ಇ. ಪಿ. ಮೂಲಕ ಖರ್ಚು ಮಾಡಿದ ಹಣವೆಷ್ಟು ಹಾಗೂ ಪುತ್ತೂರು ತಾಲ್ಲೂಕಿನಲ್ಲಿ ಕೈಗೊಂಡ ಹೊಸ ಕಾರ್ಯಗಳಾವುವು ?